**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸವಣೂರು.**

ಅಸಲು ದಾವೆ ಸಂಖ್ಯೆ- 165/2019

ಪಿಡಬ್ಲ್ಯೂಃ 01
ದಿನಾಂಕಃ 30.06.2022
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | - ಶೀವಲೀಲಾ ಹಳ್ಳಿ |
| ತಂದೆ/ಗಂಡನ ಹೆಸರು | - ಮಹೇಂದ್ರ |
| ವಯಸ್ಸು | - 32 ವರ್ಷಗಳು |
| ಉದ್ಯೋಗ | - ಭೂಮಾಪಕರು |
| ವಾಸ ಸ್ಥಳ | - ಸವಣೂರ |

**ಮುಖ್ಯ ವಿಚಾರಣೆ- ಶ್ರೀ ಸಿ ಎಸ್ ಎಂ ವಕೀಲರಿಂದ.**

ವಾದಿ ದಾವಾ ಆಸ್ತಿಯನ್ನು ಅಳತೆ ಮಾಡಲು ಅರ್ಜಿ ನೀಡಿದ್ದರು. ಅದರಂತೆ 2017-18 ರಲ್ಲಿ ನಾನು ಅಳತೆ ಮಾಡಿ ಪಿಟಿ ಶೀಟು ಮತ್ತು ವರದಿ ತಯಾರಿಸಿರುತ್ತೇನೆ. ಈಗ ನಾನು ನೋಡುತ್ತಿರುವ ಪಿಟಿ ಶೀಟು ನಾನು ತಯಾರಿಸಿದ ಪಿಟಿ ಶೀಟು ಇರುತ್ತದೆ. ಸದರಿ ಪಿಟಿ ಶೀಟನಲ್ಲಿ 1 ರಿಂದ 4 ನೇ ಹಿಸ್ಸಾದಾವರು ಅರ್ಜಿದಾರ ಜಮೀನನಲ್ಲಿ ಒತ್ತುವರಿ ಮಾಡಿರುವುದು ಕಂಡು ಬಂದದ್ದು ಅದನ್ನು ಕೇಸರಿ ಬಣ್ಣದಲ್ಲಿ ತೋರಿಸಿದ್ದೇನೆ ಸದರಿ ಪಿಟಿ ಶೀಟಿನಬಲ್ಲಿ ನನ್ನ ಸಹಿ ಇರುತ್ತದೆ. ಸದರಿ ಪಿ ಟಿ ಶೀಟನ್ನು ಈಗಾಗಲೇ ನಿಪಿ-6 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು- ಪ್ರತಿವಾದಿ ಪರ ಶ್ರೀ ಪಿ ಆರ್ ಕೆ ವಕೀಲರಿಂದ**

ನನ್ನ ಸ್ವಂತ ಊರು ಗದಗ. ನಾನು ಸವಣೂರಿನಲ್ಲಿ ಭೂಮಾಪಕರು ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಸರ್ವೆ ನಂ.98 ರಲ್ಲಿ ಒಟ್ಟು 6 ಹಿಸ್ಸೆಗಳು ಇರುತ್ತವೆ. ನಾನು ದಾಖಲೆಗಳನ್ನು ನೋಡಿಯೇ ಹಿಸ್ಸೆಗಳು ಎಷ್ಟು ಎಂಬುದನ್ನು ಹೇಳುತ್ತೇನೆ. ಸರ್ವೆ ನಂ.98 ರಲ್ಲಿ ಹಿಸ್ಸೆ ನಂ.7 ಮತ್ತು 8 ಸಹ ಇರುತ್ತವೆ ನನಗೆ ನಂತರ ಆದ ಬೆಳವಣಿಗೆಗಳು ಗೊತ್ತಿಲ್ಲ. ಹಿಸ್ಸಾ ನಂ.7 ಮತ್ತು 8 ನೇದವರಿಗೆ ನೋಟಿಸು ಕೊಟ್ಟಿಲ್ಲ ಎಂದರೆ ಸರಿ. ಪ್ರತಿವಾದಿಯರಿಗೆ ನೋಟಿಸು ಕೊಟ್ಟಿಲ್ಲ ಎಂದರೆ ಅಳತೆ ಮಾಡುವಾಗ ಅಳತೆ ಮಾಡುವ ಜಮೀನಿನ ಎಲ್ಲಾ ಲಾಗುದಾರರಿಗೆ ನೋಟಿಸು ಕೊಟ್ಟಿದ್ದೇನೆ. ನೋಟಿಸು ಕೊಟ್ಟಿರುವ ಕುರಿತು ದಾಖಲೆಗಳನ್ನು ತಂದಿಲ್ಲ ಎಂದರೆ ಸದರಿ ಪ್ರಕರಣಕ್ಕೆ ಲಗತ್ತಿಸಿ ಇಟ್ಟಿರುತ್ತೇವೆ. ನಾವು ಅಳತೆಯನ್ನು ಟೇಪಿನಿಂದ ಮಾಡಿರುತ್ತೇವೆ. ಭೂಮಿ ಅಳೆಯಲು ಟೇಪಿನಿಂದ ಅಳೆಯುವುದು ಅಧಿಕೃತ ಅಲ್ಲ ಎನ್ನುವುದು ಸರಿಯಲ್ಲ, ಅದು ಒಂದು

ವಿಧಾನ ಇರುತ್ತದೆ. ಸರಪಳಿ ಮೂಲಕ ಭೂಮಿ ಅಳತೆ ಮಾಡಲಾಗುತ್ತದೆ ಎಂದರೆ ಹಲವಾರು ವಿಧಾನಗಳು ಇರುತ್ತವೆ ಅದರಲ್ಲಿ ಸರಪಳಿ ಕೂಡಾ ಒಂದು. ಪ್ರತಿಸಾರಿ ಸರಪಳಿಯನ್ನು ತೂಕ ಮತ್ತು ಅಳತೆ ಇಲಾಖೆಯಿಂದ ಮಾಪನವನ್ನು ಪರಿಶೀಲನೆ ಮಾಡಲಾಗುತ್ತದೆ ಎಂದರೆ ಇಲಾಖೆಯಿಂದ ವಿತರಿಸಲಾದ ಮಾಪನಗಳನ್ನು ಮಾತ್ರ ಪರೀಶಿಲನೆ ಮಾಡಲಾಗುತ್ತದೆ. ನಾನು ಇಲಾಖೆಯಿಂದ ಕೊಟ್ಟ ಟೇಪಿನಿಂದಲೇ ಅಳತೆ ಮಾಡಿರುತ್ತೇನೆ. ಆದರೆ ಅದನ್ನು ಯಾವ ವರ್ಷ ಕೊಟ್ಟಿರುತ್ತಾರೆ ಅಂತಾ ಈಗ ಹೇಳಲು ಆಗುವುದಿಲ್ಲ. ಸದರಿ ಟೇಪನ್ನು ಸಂಬಂಧಪಟ್ಟ ಇಲಾಖೆಯಿಂದ ಪರಿಶೀಲನೆ ಮಾಡುತ್ತಾರೆ ಎಂದರೆ ಅದು ನನಗೆ ಗೊತ್ತಿಲ್ಲ. ನಾನು ಆದಿನ ಅಳತೆಗೆ ನಾನು ಮತ್ತು ನನ್ನ ಸಹಾಯಕ ಸೇರಿ ಹೋಗಿದ್ದೆವು. ಯಾವ ದಿಕ್ಕಿನಿಂದ ಅಳತೆ ಶುರು ಮಾಡಿರುತ್ತೀರಿ ಎಂದರೆ ನಿಖರವಾದ ಪಾಯಿಂಟನಿಂದ ಅಳತೆ ಶುರು ಮಾಡಿರುತ್ತೇವೆ ಅದನ್ನು ಪಿಟಿ ಶೀಟನಲ್ಲಿ ಬರೆದಿರುತ್ತೇವೆ ಅದನ್ನು ನೋಡಿ ಹೇಳಬಹುದು. ಯಾವ ದಿಕ್ಕಿನಿಂದ ಅಳತೆ ಮಾಡಿರುತ್ತೇವೆ ಎಂಬುದನ್ನು ಸಿಂಬಾಲಿಕ್ ಆಗಿ ತೋರಿಸಿರುತ್ತೇವೆ, ಎಫ್ ಅಂತಾ ಬರೆಯಲಾಗಿದೆ. ಉತ್ತರದಿಂದ ಪಶ್ಚಿಮದ ಕಡೆಗೆ ಅಳತೆ ಪ್ರಾರಂಭ ಮಾಡಿರುತ್ತೇವೆ. ಅಳತೆಯನ್ನು ಸ್ಕೇಲಗೆ ಅನುಗುಣವಾಗಿ ಬರೆದಿರುತ್ತೇವೆ. ಒಂದು ಸೆಂಟಿ ಮೀಟರ = 10 ಮೀಟರ ಅಂತಾ ಪರಿಗಣನೆ ಮಾಡಲಾಗಿದೆ. ಎಷ್ಟು ಸ್ಕೇಲ ಆಗುತ್ತದೆ ಅಂತಾ ಸ್ಕೇಲನಿಂದ ಅಳತೆ ಮಾಡಿ ನೋಡಿ ಹೇಳಬೇಕಾಗುತ್ತದೆ. ಅಳತೆ ಮಾಡುವಾಗ ಸರಿಯಾಗಿ ಮಾಪನವನ್ನು ಹಿಡಿಯದಿದ್ದರೆ ದೋಷ ಉಂಟಾಗುತ್ತದೆ ಎಂದರೆ ಸರಿ. ಟೇಪನ್ನು ಯಾರು ಹಿಡಿದಿದ್ದರು ಅಂತಾ ಅವರ ಹೆಸರನ್ನು ಹೇಳಲು ಆಗುವುದಿಲ್ಲ. ವಾದಿ ಮತ್ತು ನಾವು ಮಾತ್ರ ಸೇರಿ ಅಳತೆ ಪೂರೈಸಿರುತ್ತೇವೆ ಎಂದರೆ ಸರಿಯಲ್ಲ. ವಾದಿಯ ಜಮೀನಿನ ಪೂರ್ವಕ್ಕೆ ಒಡ್ಡು ಇರುತ್ತದೆ ಎಂದರೆ ನನಗೆ ನೆನಪಿಲ್ಲ. ಏಕೆಂದರೆ 5 ವರ್ಷದ ಹಿಂದೆ ಅಳತೆ ಮಾಡಿರುತ್ತೇನೆ. ನಾನು ಆ ಒಡ್ಡನ್ನು ಬಿಟ್ಟು ಅಳೆದಿರುತ್ತೇನೆ ಎಂದರೆ ನಮಗೆ ಬದುಗಳು ಮತ್ತು ಒಡ್ಡುಗಳು ಮುಖ್ಯವಲ್ಲ ನಾವು ದಾಖಲೆಗಳ ಮೂಲಕ ಗಡಿ ಗುರುತಿಸಿಕೊಂಡು ಆ ಗಡಿಯಿಂದ ಅಳತೆ ಮಾಡುತ್ತೇವೆ. ವಾದಿಯ ಜಮೀನು ಉತ್ತರಕ್ಕೆ ಅಗಲ ಇದ್ದು, ದಕ್ಷಿಣಕ್ಕೆ ಕಡಿಮೆ ಇರುತ್ತದೆ ಎಂದರೆ ಸರಿ. ನಾನು ದಕ್ಷಿಣದ ಕಡೆಗೆ ವಾದಿಯ ಜಮೀನನ್ನು ಸ್ವಲ್ಪ ಬಿಟ್ಟು ಅಳತೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಹಿಸ್ಸಾ ನಂ.5 ರಲ್ಲಿ ಕೇಸರಿ ಬಣ್ಣದಿಂದ ಮುಂದೆ ತೋರಿಸಿಲ್ಲ ಎಂದರೆ ಸರಿಯಲ್ಲ, ಪಿಟಿ ಶೀಟ ಪ್ರಕಾರ ಅಳತೆ ಮಾಡಿರುತ್ತೇವೆ. ಮೂಲ ಪಿಟಿ ಶೀಟನ್ನು ಕೋರ್ಟಗೆ ತಂದಿಲ್ಲ ಎನ್ನುವುದು ಸರಿ. ಉದ್ದೇಶಪೂರ್ವಕವಾಗಿ ವಾದಿಯ ಜಮೀನಿನಲ್ಲಿರುವ ಪೂರ್ವಕ್ಕೆ ಇರುವ ಒಡ್ಡನ್ನು ಬಿಟ್ಟು ಅಳೆದಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಒಡ್ಡು ವಾದಿಯ ಜಮೀನಲ್ಲಿರುತ್ತದೆ ಎಂದರೆ

ಸರಿಯಲ್ಲ ನಿಯಮಾನುಸಾರ ದಾಖಲೆ ಪ್ರಕಾರ ಅಳೆದಿರುತ್ತೇವೆ. ಹಿಸ್ಸಾ ನಂ.5 ಸಹ ವಾದಿಯ ಜಮೀನು ಎಂದರೆ ನನಗೆ ಗೊತ್ತಿಲ್ಲ. ನನಗೆ ಲಭ್ಯವಿದ್ದ ದಾಖಲೆಗಳ ಮೇಲೆ ಅಳತೆ ಮಾಡಿ ಶೀಟು ತಯಾರಿಸಿದ್ದೇನೆ. ವಾದಿಯರು ನನಗೆ ಬಹಳ ದಿನದಿಂದ ಪರಿಚಯ ಎಂದರೆ ಸರಿಯಲ್ಲ. ಅರ್ಜಿ ಬಂದಿರುತ್ತದೆ ಮಾಡಿರುತ್ತೇನೆ. ಪ್ರತಿವಾದಿಯರಿಗೆ ನೋಟಿಸು ಕೊಟ್ಟಿಲ್ಲ ಎನ್ನುವುದು ಸರಿಯಲ್ಲ. ಅಧಿಕೃತ ಅಳತೆ ಮಾಪನದಿಂದ ಅಳತೆ ಮಾಡಿಲ್ಲ ಎನ್ನುವುದು ಸರಿಯಲ್ಲ. ವಾದಿಯ ಮಾತು ಕೇಳಿ ಖೊಟ್ಟಿ ಶೀಟು ತಯಾರಿಸಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಅದಕ್ಕೆ ಸಹಾಯವಾಗಲಿ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು. ಸವಣೂರು.

Petitioner present filed examination chief examined as PW1 Ex.P-1 to 3 are marked. Close evidence her side. Heard. For orders. Call on 06.06.2022

CJ and JMFC., Savanur